ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 09–10–2020

# ಮಾಧ್ಯಮ ಆಮಂತ್ರಣ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪೂರ್ವ ವಲಯದ ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯ, ಶಾಂತಿನಗರ ಇಲ್ಲಿ ಕೋವಿಡ್ ಕೇರ್ ಸೆಂಟರ್‌ನ ಉದ್ಘಾಟನೆ :

ವಿ. ಸೋಮಣ್ಣ, ವಸತಿ ಸಚಿವರು, ಕರ್ನಾಟಕ ಸರ್ಕಾರ

ದಿನಾಂಕ : 12–10–2020, ಸೋಮವಾರ ಬೆಳಿಗ್ಗೆ : 11–00 ಗಂಟೆಗೆ

ಸ್ಥಳ : ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯ, ನಂ. 14 ಪ್ರೈಮ್ ರೋಸ್ ರಸ್ತೆ, ಶಾಂತಲಾನಗರ, ಬೆಂಗಳೂರು

# ಪತ್ರಿಕಾ ಪ್ರಕಟಣೆ

## ದಿಶಾ ಸಮಿತಿ ಸದಸ್ಯರಾಗಿ ಕುಂದರನಹಳ್ಳಿ ರಮೇಶ್

ಬೆಂಗಳೂರು, ಅಕ್ಟೋಬರ್ 09 (ಕರ್ನಾಟಕ ವಾರ್ತೆ) :

ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರ ಉಪಾಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಜ್ಯಮಟ್ಟದ ದಿಶಾ ಸಮಿತಿಗೆ ಕುಂದರನಹಳ್ಳಿ ರಮೇಶ್, ಅಧ್ಯಕ್ಷರು, ಅಭಿವೃದ್ಧಿ ರೆವೊಲ್ಯೂಷನ್ ಫೋರಂ ತುಮಕೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ದಿಶಾ ಸಮಿತಿಗೆ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# <u>ಸಚಿವರ ಪ್ರವಾಸ</u>

**<u>ಬೆಂಗಳೂರು, ಅಕ್ಟೋಬರ್ 09 (ಕರ್ನಾಟಕ ವಾರ್ತೆ) :</u>**

**ಬೃಹತ್ ಮತ್ತು ಮದ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವ ಜಗದೀಶ್ ಶೆಟ್ಟರ್ ಅವರು ಅಕ್ಟೋಬರ್ 11 ರಂದು ಧಾರವಾಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

Kannada Film Archives and Kannada Film Museum

Bengaluru, October 9 (Karnataka Information)

Karnataka Chalanachitra Academy (KCA) is all set to realise its ambitious idea of setting up of state of art Kannada Film Archives and Kannada Film Museum.

KCA has constituted a seven-member committee, headed by Chairman KCA Suneel Puranik in July 2020 for the purpose. N. Vidyashankar, Artistic Director of Bengaluru International Film Festival, Bengaluru historian Suresh Moona, Art Director Arun Sagar, Cinematographer Ashok Kashyap, senior journalist and writer-Muralidhara Khajane and Himantha Raju, G. Registrar KCA, are members of this expert committee.

The seven member committee has been asked to study and submit a report on setting up of Kannada Film Archive and Kannada Film museum by formulating modalities for acquiring; surviving film prints, Beta copies, publicity stills, songs books hand bills, books on Kannada cinema, still photographs, lobby cards-in short anything and everything that is associated with the film culture of Karnataka.

The brief of this committee is to submit a detailed report on setting up of Kannada Film Archives on the lines of the National Film Archive of India (NFAI) in Pune and Film Museum in Mumbai.

The Committee will also identify institutions across the country, which extend support in developing this Kannada Film Archives and Kannada Film Museum project. The immediate task of KCA is to fast track the process of gathering and preserving, digitalising, and restoring all the archival material of every form that reaches KCA.

Academy strongly believes that classifying and documenting data and materials pertained to films, will help to undertake and encourage research on Cinema, especially on Kannada cinema. This process facilitates KCA in accomplishing its ambitious idea of dissemination of film culture in the State.

The ambitious Kannada Film Archive and Kannada Film Museum is coming at Amruthotsava Bhavana in Nandini Layout, which is the headquarters if Karnataka Chalanachitra Academy and Directorate of Bengaluru International Film Festival.

The Pune based National Film Archives of India (NFAI) has promised to support the Karnataka's effort to establish a full-fledged film archive of its own.

The KCA has already approached the film producers and association and other cinema organizations for archival materials.

Willing to donate?

By the way, anyone willing to donate relevant materials including;

Film posters

Song and lyrics published and unpublished books

Screenplay scripts

Film-related books on other sub-languages of Karnataka such as; Tulu, Kodava, Konkani, Banjara, and Byari.

Those interested to contribute these film related materials either contact Karnataka Chalanachitra Academy in person or through the mail-

kcabdaarchives@gmail.com They can also contact Academy authorities on 080 23493410, 23493441, 9449322102, 9448734847, 9742572100

## ಕರ್ನಾಟಕ ಚಲನಚಿತ್ರ ಅಕಾಡೆಮಿಯಿಂದ ಚಲನಚಿತ್ರ ಭಂಡಾರ : ಸುನೀಲ್ ಪುರಾಣಿಕ್

ಬೆಂಗಳೂರು, ಅಕ್ಟೋಬರ್ 09 (ಕರ್ನಾಟಕ ವಾರ್ತೆ) :

ಕನ್ನಡ ಚಿತ್ರರಂಗ ಐತಿಹಾಸಿಕ ದಾಖಲೆಗಳ ಕ್ರೋಢೀಕೃತ ಪ್ರಾಚ್ಯಾಗಾರ "ಕರ್ನಾಟಕ ಚಲನಚಿತ್ರ ಭಂಡಾರ" ಸ್ಥಾಪಿಸಲು ಕರ್ನಾಟಕ ಚಲನಚಿತ್ರ ಅಕಾಡೆಮಿ ಮುಂದಾಗಿದೆ.

ಕನ್ನಡ ಸೇರಿದಂತೆ ಜಗತ್ತಿನ ಎಲ್ಲಾ ಭಾಷೆಗಳ ಶ್ರೇಷ್ಠ ಚಲನಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಮಾಡಿಸಿ, ಆಸಕ್ತರು ಮತ್ತು ಸಂಶೋಧಕರ ವೀಕ್ಷಣೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಚಲನಚಿತ್ರ ಭಂಡಾರ ರೂಪುಗೊಳ್ಳುತ್ತಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರ ಸುನೀಲ್ ಪುರಾಣಿಕ್ ಸುದ್ದಿಗೋಷ್ಠಿಯಲ್ಲಿಂದು ತಿಳಿಸಿದರು.

ಪೂನಾದಲ್ಲಿರುವ ಭಾರತೀಯ ರಾಷ್ಟ್ರೀಯ ಚಲನಚಿತ್ರ ಪ್ರಾಚ್ಯಗಾರ ಮತ್ತು ಮುಂಬೈನಲ್ಲಿರುವ ಭಾರತೀಯ ಚಲನಚಿತ್ರಗಳ ರಾಷ್ಟ್ರೀಯ ಸಂಗ್ರಹಲಾಯದ ಮಾದರಿಯಲ್ಲಿ ಚಲನಚಿತ್ರ ಭಂಡಾರ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ತ್ವರಿತಗತಿಯಲ್ಲಿ ಕಾರ್ಯರೂಪಕ್ಕೆ ತರುವ ಉದ್ದೇಶ ಹೊಂದಲಾಗಿದ್ದು ಈಗಾಗಲೇ ಚಟುವಟಿಕೆಗಳು ಆರಂಭವಾಗಿವೆ ಎಂದು ಪುರಾಣಿಕ್ ಹೇಳಿದರು.

ಚಲನಚಿತ್ರ ಆಸಕ್ತರು ಮತ್ತು ಸಂಶೋಧಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಹೊಂದಿರುವ ಹಿನ್ನೆಲೆಯಲ್ಲಿ ಚಲನಚಿತ್ರಗಳ ಪ್ರಿಂಟ್‌ಗಳು, ಬೀಟಾ ಪ್ರತಿಗಳು, ಪ್ರಚಾರದ ಸ್ಥಿರ ಚಿತ್ರಗಳು, ಹಾಡುಗಳು, ಪುಸ್ತಕಗಳು, ಕರಪತ್ರಗಳು, ಕನ್ನಡ ಚಿತ್ರರಂಗಕ್ಕೆ ಸಂಬಂಧಪಟ್ಟ ಪುಸ್ತಕಗಳು, ಲಾಬಿ ಕಾರ್ಡ್ಸ್ ಹೀಗೆ ಹಲವು ಚಿತ್ರಗಳಿಗೆ ಸಂಬಂಧಿಸಿದ ಮಾಹಿತಿಗಳು ಮತ್ತು ವಸ್ತುಗಳನ್ನು ಸಂಗ್ರಹಿಸಲಾಗುತ್ತಿದೆ. ಈ ಚಲನಚಿತ್ರ ಭಂಡಾರ ಸ್ಥಾಪನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಂದು ಕೋಟಿ ರೂ.ಗಳ ನೆರವು ನೀಡಿದ್ದು ಈ ಅನುದಾನದ ನೆರವಿನಲ್ಲಿ ಭಂಡಾರದ ನಿರ್ವಹಣೆ ಆಗಲಿದೆ ಎಂದರು.

ನಂದಿನಿ ಬಡಾವಣೆಯಲ್ಲಿರುವ ಕನ್ನಡ ಚಲನಚಿತ್ರ ಅಮೃತೋತ್ಸವ ಭವನದ ನೆಲಮಹಡಿಯಲ್ಲಿ ಚಲನಚಿತ್ರ ಭಂಡಾರ ಸ್ಥಾಪನೆ ಮಾಡುತ್ತಿದ್ದು ಇದಕ್ಕಾಗಿ ಸರ್ಕಾರ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಮ್ಮತಿ ನೀಡಿದೆ. ಹೀಗಾಗಿ ಆಸಕ್ತರು ತಮ್ಮ ಬಳಿಯಿರುವ ಅತ್ಯಮೂಲ್ಯ ಚಿತ್ರರಂಗಕ್ಕೆ

ಸಂಬಂಧಿಸಿದ ವಸ್ತುಗಳನ್ನು ಅಕಾಡೆಮಿ ನೀಡುತ್ತಿದ್ದು ಸಾರ್ವಜನಿಕರು ತಾವು ಕನ್ನಡ ಚಿತ್ರೋದ್ಯಮಕ್ಕೆ ಸಂಬಂಧಿಸಿದಂತೆ ಅಮೂಲ್ಯ ಸಂಗ್ರಹಗಳಿದ್ದಲ್ಲಿ ಅಕಾಡೆಮಿಗೆ ನೀಡುವಂತೆ ಮನವಿ ಮಾಡಿದರು.

ಚಲನಚಿತ್ರ ಸಂಸ್ಕೃತಿಯನ್ನು ಸಂರಕ್ಷಿಸಲು ಹಾಗೂ ವಿಶೇಷವಾಗಿ ಕನ್ನಡ ಚಿತ್ರರಂಗದ ಬಗ್ಗೆ ಸಂಶೋಧನೆ ಮಾಡಲು ಉತ್ತೇಜಿಸಲು, ದಾಖಲೀಕರಣಕ್ಕೆ ನೆರವಾಗಲು ಬಯಸುವವರು ತಮ್ಮಲ್ಲಿ ಚಲನಚಿತ್ರಕ್ಕೆ ಸಂಬಂಧಿಸಿದ ಅಪರೂಪದ ವಸ್ತುಗಳನ್ನು ದಾಖಲೆಗಳನ್ನು ನೀಡುವಂತೆ ಮನವಿ ಮಾಡಿದರು.

ಚಲನಚಿತ್ರ ಸಂಬಂಧಿತ ಎಲ್ಲಾ ಸಂಗ್ರಯೋಗ್ಯ ವಸ್ತುಗಳನ್ನು ಸಂಗ್ರಹಿಸಲು ಅಕಾಡೆಮಿ ಉದ್ದೇಶಿಸಿದ ಹಿನ್ನೆಲೆಯಲ್ಲಿ ಅಪ್ರಕಟಿತ ಪುಸ್ತಕಗಳು, ಚಿತ್ರಕಥೆ ಮತ್ತು ಸಂಭಾಷಣೆಗಳು, ಚಲನಚಿತ್ರ ಸಂಬಂಧಿಸಿದ ಪುಸ್ತಕಗಳು ಕೊಡವ, ಕೊಂಕಣಿ, ಬಂಜಾರ, ತುಳು ಮತ್ತು ಬ್ಯರಿ ಸೇರಿದಂತೆ ಕರ್ನಾಟಕದ ಇತರ ಭಾಷೆಯಲ್ಲಿ ತಯಾರಾದ ಚಿತ್ರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ಬಿಡಿಎ ಚಲನಚಿತ್ರ ಭಂಡಾರಕ್ಕೆ ನೀಡುವಂತೆ ಮನವಿ ಮಾಡಿದರು.

<u>ಸಲಹಾ ಸಮಿತಿ ರಚನೆ :</u>

ಚಲನಚಿತ್ರ ಭಂಡಾರ ಸ್ಥಾಪನೆ ಸಂಬಂಧ ಪರಿಣಿತರ ಅಭಿಪ್ರಾಯ ಪಡೆಯಲು ಅಂತರರಾಷ್ಟ್ರೀಯ ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ, ಶ್ರೀ ಎನ್. ವಿದ್ಯಾಶಂಕರ್, ಪತ್ರಕರ್ತರಾದ ಶ್ರೀ ಮುರಳೀಧರ ಖಜಾನೆ, ಸಂಶೋಧಕರಾದ ಶ್ರೀ ಸುರೇಶ್ ಮೂನ, ಕಲಾ ನಿರ್ದೇಶಕರಾದ ಶ್ರೀ ಅರುಣ್ ಸಾಗರ್ ಮತ್ತು ಛಾಯಾಗ್ರಾಹಕರಾದ ಶ್ರೀ ಅಶೋಕ್ ಕಶ್ಯಪ್ ಸೇರಿದಂತೆ ಹಲವರು ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ಈಗಾಗಲೇ ಎರಡು ಬಾರಿ ಸಭೆ ಸೇರಿ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್, ಹಿಮಂತರಾಜು. ಜಿ ಉಪಸ್ಥಿತರಿದ್ದರು.

# “ಒಂದು ಭೂಮಿ ಒಂದು ಮನೆ”

<u>ಬೆಂಗಳೂರು, ಅಕ್ಟೋಬರ್ 09 (ಕರ್ನಾಟಕ ವಾರ್ತೆ) :</u>

**World Wildlife Fund (WWF)** -ಇಂಡಿಯಾ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇವುಗಳ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ರಾಜ್ಯದ 1 ರಿಂದ 8ನೇ ತರಗತಿ ಸರ್ಕಾರಿ ಮತ್ತು ಅನುದಾನಿತ ಶಾಲೆಯ ವಿದ್ಯಾರ್ಥಿಗಳಿಗೆ  ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ “ಒಂದು ಭೂಮಿ ಒಂದು ಮನೆ” ಎಂಬ ಆನ್‌ಲೈನ್ ಕಾರ್ಯಕ್ರಮವನ್ನು ಯೋಜಿಸಿದ ಹಾಗೆ ಸೆಪ್ಟೆಂಬರ್‌ನಿಂದ ಪ್ರಾರಂಭವಾಗಿದೆ. ಈಗಾಗಲೇ ಮೊದಲನೇ ಹಂತ ಸುಸೂತ್ರವಾಗಿ ಜರುಗಿ, ದೇಶದಾದ್ಯಂತ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದಿರುತ್ತಾರೆ.

ಎರಡನೇ ಹಂತವು ಈಗಷ್ಟೇ ಪ್ರಾರಂಭವಾಗಿದೆ.  ಇಚ್ಛೆಯುಳ್ಳ ವಿದ್ಯಾರ್ಥಿಗಳು ಈಗಲೂ ಸಹ ನೋಂದಣಿ ಮಾಡಿಕೊಂಡು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗೂಗಲ್ ಜಾಲತಾಣದಲ್ಲಿ ಲಿಂಕ್ ಬಳಸಿ ನೋಂದಣಿಮಾಡಿಕೊಂಡು ಸೆಪ್ಟೆಂಬರ್‌ನಿಂದ ನವೆಂಬರ್ 2020ರವರೆಗೆ ದಿಕ್ಷಾ (Diksha) ಅಥವಾ ಫೇಸ್‌ಬುಕ್‌ನಲ್ಲಿಯೂ ವೀಕ್ಷಿಸಬಹುದು.  ಕಾರ್ಯಕ್ರಮದ ನಂತರ ಕೇಳುವ ಸರಳ ಪ್ರಶ್ನೆಗಳಿಗೆ ಉತ್ತರಿಸಿ ಫೀಡ್ ಬ್ಯಾಕ್ ನೀಡಬೇಕಾಗುತ್ತದೆ.  ಶಿಕ್ಷಕರ ಅಥವಾ ಪೋಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ವಿನಂತಿಸಲಾಗಿದೆ.  ಭಾಗವಹಿಸಿದ ಶಾಲೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಡಿಜಿಟಲ್ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ.  ಉಚಿತವಾಗಿ ಭಾಗವಹಿಸಬಹುದಾದ ಈ ಕಾರ್ಯಕ್ರಮದ ವಿವರಗಳಿಗೆ ಸಂಪರ್ಕಿಸಿ: ಸೌಂದರ್ಯವಲ್ಲಿ, ಮುಖ್ಯಸ್ಥರು, ಕರ್ನಾಟಕ ಸ್ಟೇಟ್ ಆಫೀಸ್, WWF-India ಮೊ. 9845402299, ಶ್ರೀ ರಾಜಶೇಖರಗೌಡ ಪಾಟೀಲ, ಯೋಜನಾ ಸಹಾಯಕರು, ಕರಾವಿಪ ಮೊ. 9008442557